# KANNADA

# ನಮ್ಮ ಶಾಲೆ

ನಮ್ಮ ಶಾಲೆ ಸುಂದರ
ಇದುವೇ ನಮ್ಮ ಮಂದಿರ

ರಮ್ಯತೆಯ ಪರಿಸರ
ಇದುವೇ ನಮ್ಮ ಪರಿಕರ
ಜ್ಞಾನ ಕೊಟ್ಟ ದೇಗುಲ
ಜೀವಕ್ಕೆಲ್ಲ ಫಲಫಲ

ಆಟಕ್ಕುಂಟು ಪಾಠಕ್ಕುಂಟು
ಚಲನ ಶಕ್ತಿ ವೇಗವುಂಟು
ದೈವವೆಂಬ ಗುರುಗಳು
ಕೋಟಿ ಕೋಟಿ ನಮನಗಳು

ಶಿಸ್ತಿಗೆಲ್ಲಾ ಹೆಸರು ಪಡೆದ
ನಾಡಿಗೆಲ್ಲ ಜ್ಞಾನ ಎರೆದು
ಕಲಿಯಲೆಂದು ಬಂದೆವು
ಕಲಿತು ಕಲಿತು ನಲಿದೆವು

ನಮ್ಮ ಶಾಲೆಯೊಂದು ಮಹಿಮೆ
ಅದುವೆ ನಮ್ಮ ಹಿರಿಮೆ ಗರಿಮೆ
ವಿದ್ಯೆಯೆಂಬ ದೇವಿಗೆ
ಅಲಂಕಾರವೆಂಬ ಹೂ ಮಲ್ಲಿಗೆ

— PRAMITH V MEHTA, *9C*

# ಅಂತರಾಳ

ಅಂತರಾಳದಲ್ಲಿ ಅನುಕಂಪದ
ಅಲೆಯೊಂದು ಮೂಡಿ,
ಮನದಾಳದಲ್ಲಿ ತೇಲಿ ಬಂದಾಗ
ನೀ, ಜಾಣೆಯೆಂದು ತಿಳಿದು,
ಕಹಿ ಉಂಡ
ನಿನ್ನ ಅಂತರಂಗಕ್ಕೆ ಪ್ರೀತಿಯ
ನೀಡಲು ಬಯಸಿದೆ

ಆಗ, ನನ್ನತನ ಬದಿಗಿಟ್ಟು
ನಿನಗೆ ನಿಜ ಜೀವನದ ಮರ್ಮ ಬೋಧಿಸಿದೆ
ಜೀವನದ ಸವಿಯುಣದಿದ್ದರು
ಉಂಡವನಂತೆ ಬಣ್ಣಿಸಿ ಹೇಳಿ
ನನ್ನ ಆದರ್ಶತನ ತೋರಿಸಿದೆ

ಆದರೂ, ಹೆಣ್ಣೇ,
ಬೇಡನ ಮುಂದೆ ಬಸವ ಪುರಾಣ
ಹೇಳಿದಂತೆ
ಹೆಣ್ತನದ ನಿನ್ನ ಅಂತರಂಗದಲ್ಲಿ
ಇಂಗದಿರುವುದು ನೋಡಿದರೆ,
ಈ ಕಬ್ಬಿಗನಿಗೂ ಅರ್ಥವಾಗದ
ವಿಮರ್ಶೆ ಕಾಣದ ಯಾವುದೊ
ಹುಚ್ಚು ಸಿದ್ದಾಂತಕ್ಕೆ ಒಳಗಾಗಿ
ನಿನ್ನನ್ನೇ ನೀನು ಕೀಳು ಮಾಡಿಕೊಳ್ಳುವ
ಬುದ್ಧಿಗೆ
ನಗಬೇಕೋ, ಅಳಬೇಕೋ
ನನಗೊಂದು ತಿಳಿಯದು

— BHOOMIKA L, *9B*

# "ಸ್ವಾತಂತ್ರ್ಯದ ಹಣತೆ"

ಈ ದಿನ ಶುಭ ದಿನ
ನಮ್ಮಯ ಹೆಮ್ಮೆಯ ಭಾರತಕ್ಕೆ
ದಾಸ್ಯತೆಯಿಂದ ಮುಕ್ತಿಯ ಪಡೆದು
ಭಾರತೀಯರು ಸಂಭ್ರಮಿಸಿದ
ದಿನವಿದುವೆ

ಭಾರತ ಮಾತೆಯ ಮಡಿಲಲಿ
ಜನಿಸಿದ ಕಲಿಗಳು ನಾವೆಲ್ಲ
ಏನೇ ಬರಲಿ ಏನೇ ಆಗಲಿ
ದೇಶಕೆ ಮುಡಿಪು ನಮ್ಮಯ ಉಸಿರು

ಜಾತಿ ಧರ್ಮವ ತೊರೆದು
ಒಗ್ಗಟ್ಟಿನಿಂದ ಬದುಕೋಣ
ಏನೇ ಆಗಲಿ, ಏನೇ ಬರಲಿ
ಐಕ್ಯತೆಯಿಂದ ಮೆರೆಯೋಣ

ವಿಶ್ವದ ಜನಕೆ ನಮ್ಮಯ ದೇಶದ
ಹಿರಿಮೆಯನು ಸಾರೋಣ
ಭಾರತ ಒಂದೇ ಮಾದರಿ ದೇಶ
ಎಂಬುದನು ನಾವು ತಿಳಿಸೋಣ

ವಿವಿಧತೆಯಲ್ಲಿ ಏಕತೆ ತೋರುತ
ಸೋದರತೆಯಿಂದ ಬಾಳೋಣ
ಎಲ್ಲರು ಕೂಡಿ ಬೆಳೆಯುತ
ದೇಶದ ಐಕ್ಯತೆ ಕಟ್ಟೋಣ

— ANUSHKA M, *8C*

# ಗಾಳಿಪಟ

ಬಾನಲಿ ಮೇಲ ಮೇಲಕೇರುತಿಹುದು
ಬಣ್ಣ - ಬಣ್ಣದ ಗಾಳಿಪಟ
ಜೀವನದಲಿ ಸಾಧನೆಯ ಪಥವ
ತೋರಲು,

ಪಟವು ಗಾಳಿಗೆ ಸಿಲುಕಿ ಅತ್ತಿಂದಿತ್ತ
ಇತ್ತಿಂದತ್ತ ಚಲಿಸುತಿದೆ
ಬದುಕಿನ ನೆಲೆಯ ಸುಖ ದುಃಖಗಳ
ತಿಳಿಸುತಿದೆ.

ಒಮ್ಮೆಲೆ ಮೇಲಕೆ ಒಮ್ಮೆಲೆ ಕೆಳಕೆ
ಹಾರುತಲಿಹುದು
ಸಿರಿತನ ಬಡತನವ ತೋರಿಸಲು
ಯಾವುದು ಇಲ್ಲಿ ಶಾಶ್ವತವಲ್ಲ
ಎನ್ನುವುದನು ಸಾರುತಿದೆ.

ಗಾಳಿಪಟದ ದಾರವ ಹಿಡಿದು
ಎಳೆಯುವಂತೆ
ಸೂತ್ರಧಾರನು ಆಡಿಸುತಿಹನು
ನಮ್ಮಯ ಜೀವನವ

ಗಾಳಿಯು ಹೆಚ್ಚಲು ಬೀಗುತ ಪಟವು
ಬಹು ಎತ್ತರಕೆ ಹಾರುವುದು
ನಾನೇ ದೊಡ್ಡವ ಎನ್ನುವ ಅಹಂ
ಭಾವನೆಯ ತೋರುವುದು

ಮೇಲಕೆ ಏರಿದ ಪಟವದು ಹರಿದು
ನೆಲಕಚ್ಚುವುದು
ಯಾವುದೂ ಶಾಶ್ವತವಲ್ಲ ಎಂಬ
ಸತ್ಯವ ಇದು ತಿಳಿಸುವುದು.
ಜೀವನ ನಶ್ವರ ಎಂಬ ಅರಿವನು
ಮೂಡಿಸುವುದು

— YUKTHI A, *8D*

# “ನಮ್ಮ ಪರಿಸರ”

ಓ ಮನುಜ.....
ಓ ಮನುಜಾ..........
ಧರೆಯು ಹತ್ತಿ ಉರಿಯುತಿಹುದು,
ಪ್ರಾಣ ಪಕ್ಷಿಯು ಹಾರುತಿಹುದು,
ಎಲ್ಲೆಲ್ಲೂ ರೋಧನ, ಆಕ್ರಂದನ
ಮುಗಿಲು ಮುಟ್ಟಿವೆ,
ಸುಡುವ ಹೆಣಗಳ ಕಾವು!
ಅರೆ,
ಇದೆಲ್ಲವಾ ನಿನಗೇಕೆ ಹೇಳುತಲಿರುವೆ ಎನ್ನುವೆಯಾ?
ಹೌದು, ಇದಕೆ ಕಾರಣ ನೀನೇ!!! ನೀನೇ!
ಅಂದು ತುಂಬಿದ
ಕಣ್ಮನ ಸೂರೆಗೊಂಡ ಪ್ರಕೃತಿಯ ಮಾಡಿದೆ ನಾಶ,
ಇದರ ಫಲವೇ ಇಂದಿನ ವಿನಾಶ,
ಈಗಾದರೂ ಎಚ್ಚೆತ್ತು ನಿಲ್ಲಿಸು, ನಿಲ್ಲಿಸು, ನಿಲ್ಲಿಸು
ಪ್ರಕೃತಿಯ ಮಡಲಿಗೆ ಬೀಸುತ್ತಿರುವ ಕೊಡಲಿಯ ಏಟನು......
ಯೋಚಿಸು, ಯೋಚಿಸು, ಯೋಚಿಸು,.....,
ಮರ ಕಡಿಯುವ ಮುನ್ನ
ನೂರು ಬಾರಿ ಯೋಚಿಸು,
ಅದಕಿಲ್ಲವೇ ಜೀವ? ಅದಕಿಲ್ಲವೇ  ಬದುಕುವ  ಹಂಬಲ?
ನಿನಗೆ ಮಾತ್ರ ಬದುಕುವ ಆಸೆಯೇ?
ಬಿಡು, ಬಿಡು, ಬಿಡು,
ನಿನ್ನೀ ಸ್ವಾರ್ಥ ತುಂಬಿದ ಗುಣವ,
ಕಣ್ತೆರೆದು ನೋಡು
ಎಲ್ಲರ ಆನಂದವ.

— GAGANASHREE, *9E*

# ಪಂಚತಂತ್ರದ ಕಥೆ

ಒಂದಾನೊಂದು ಕಾಲದಲ್ಲಿ ಒಂದು ಕಾಡಿನಲ್ಲಿ ಒಂದು ನರಿ ಇತ್ತು. ನಿರ್ಜನವಾದ ಪ್ರದೇಶದಲ್ಲಿದ್ದ ಗುಹೆಯೊಂದರಲ್ಲಿ ಅದರ ವಾಸ. ಒಂದು ದಿನ ನರಿ ಅಲ್ಲಿ ಇಲ್ಲದೆ ಇದ್ದಾಗ ಹಸಿವೆಯಿಂದ ಕಂಗಾಲಾಗಿದ್ದ ಸಿಂಹವೊಂದು ಅಲ್ಲಿಗೆ ಬಂತು. ಗುಹೆಯನ್ನು ಹೊಕ್ಕು ಆ ಸಿಂಹ ಸುತ್ತಲೂ ಮೂಸಿ ನೋಡಿತು. ಅದು ನರಿಯ ವಾಸಸ್ಥಳ ಎಂಬುದರಲ್ಲಿ ಸಂದೇಹವಿಲ್ಲ ಎಂದು ಸಿಂಹ ಭಾವಿಸಿತು. ಆಹಾರ ಹುಡುಕಿಕೊಂಡು ನಾನು ಅಲೆಯುವುದು ಏಕೆ? ಇಲ್ಲಿ ಕೊಂಚ ಒರಗಿಕೊಂಡು ವಿಶ್ರಾಂತಿ ತೆಗೆದುಕೊಳ್ಳುತ್ತೇನೆ. ನರಿ ಹಿಂತಿರುಗಿ ಬಂದಾಗ ನನಗೆ ಸವಿಯೂಟ ಸಿಕ್ಕದೇ?

— LOCHAN VIJAY, *4A*

# ನಮ್ಮ ಜೀವ ನಮ್ಮೂರ ಕೆರೆ

ಕೆರೆಯನ್ನು ಉಳಿಸಿರಿ ಬೆಳೆಯನ್ನು ಬೆಳೆಸಿರಿ
ಕೆರೆಗಳ ಬೀಡು ನಮ್ಮದು
ಕೆರೆಯಿಂದ ಜೀವ ನಮ್ಮದು

ಕೆರೆಯಲ್ಲಿ ಹೂಳು ಹೂತು ಹೋಗಿರಲು
ಹೂಳನ್ನು ಎತ್ತುವರು ಯಾರಿಹರು? ಧರೆಯೊಳು
ಸಾವಿರಾರು ಕೆರೆಗಳು ಹೂತು ಹೋಗಿ ಕಣ್ಮರೆಯಾಗಲು
ರಕ್ಷಣೆ ಎಲ್ಲಿದೆ ಕೆರೆಗಳಿಗೆ?

ಜೀವನಕೆ ಆಧಾರವಾಗಿಹ ಈ ಕೆರೆಗಳಿಗೆ
ಲಕ್ಷ್ಯವನು ಕೊಡಲಿಲ್ಲ ನಾವೆಲ್ಲರೂ
ಪ್ರತಿಯೊಬ್ಬ ಪ್ರಜೆಯೂ ನಮ್ಮದು ಕೆರೆಯು
ಅನ್ನುವ ಭಾವ ಬರಲು ಉಳಿಯಲು ಸಾಧ್ಯ ಕೆರೆಯು

ಕೆರೆಯಲ್ಲಿ ತೇವವಿಲ್ಲದೆ ನೀರನರಸಿ ಸಾಲಾಗಿ ಊರೊಳಗೆ ಬಂದುಬಿಟ್ಟೆವು
ಅರೆಕ್ಷಣ ನಿಂತು ನೋಡಿದ ಮನುಜರು
ಭೂಮಿಯನು ಕೊರೆದು ಹಾಕಿದರು ಬೋರುಗಳನು

ಕೆರೆಯನ್ನು ಉಳಿಸಿ ಬೆಳೆಯನ್ನು ಬೆಳೆಸಿ
ಇಲ್ಲವಾದಲ್ಲಿ ಉಳಿಗಾಲವಿಲ್ಲ ನಿನಗೆ ಓ ಮನುಜ.

— VISMITHA S, *7A*

# ನಮ್ಮ ಸುಂದರ ನಾಡು

ಬನ್ನಿರಿ ಮಕ್ಕಳೆ ಎಲ್ಲರು ಸೇರಿ ಕನ್ನಡ ಹಬ್ಬವ ಮಾಡೋಣ
ಎಲ್ಲರ ಮನದಲಿ ಎಲ್ಲರ ಗುಣದಲಿ ಕನ್ನಡ ಭಾಷೆಯ ಬಿತ್ತೋಣ
ಕನ್ನಡೇತರರು ಕನ್ನಡ ಭಾಷೆಯ ಕಲಿಯುವಂತೆ ಮಾಡೋಣ

ಜ್ಞಾನಪೀಠವ ಪಡೆದ ಕವಿಗಳ ಸಾಧನೆಯನ್ನು ತಿಳಿಸೋಣ
ಕನ್ನಡ ಮಣ್ಣಿನ ಕನ್ನಡ ಋಣವ ತೀರಿಸೊ ಬಗೆಯನು ಸಾರೋಣ

ನಮ್ಮಯ ನೆಲವು ನಮ್ಮಯ ಜಲವು ಶ್ರೇಷ್ಠತೆಯೆಂದು ತಿಳಿಸೋಣ
ಕನ್ನಡಿಗರೆಲ್ಲರೂ ಒಂದೇ ತಾಯಿಯ ಮಕ್ಕಳು ಎನ್ನುತ ಬಾಳೋಣ

ಏನೇ ಆಗಲಿ ಏನೇ ಬರಲಿ ಒಗ್ಗಟ್ಟಿನಿಂದ ಬದುಕೋಣ.
ಕನ್ನಡವೇ ಆಸ್ತಿಯು ಎಂಬುದನು ನಾವು ಅರಿಯೋಣ.



— MOULYA PRAKASH, *8A*



# ಎಷ್ಟೊಂದ ಚೆಂದಿತ್ತು ನಂಬಾಲ್ಯ

ಮಣ್ಣಾಗ ಆಡ್ತಿದ್ವಿ
ಮುಳ್ಳಾಗ ತಿರಗತಿದ್ವಿ,
ಬಿಸಲಾಗ ಸುತ್ತಾಡ್ತಿದ್ವಿ,
ಉಣ್ಣೂದು ಮರಿತಿದ್ವಿ,
ಆದ್ರೂ ಏನೂ ಆಗ್ತಿರ್ಲಿಲ್ಲ,
ಎಲ್ರೂ ಚನ್ನಾಗಿರ್ತಿದ್ವಿ,
ಎಷ್ಟೊಂದು ಚೆಂದಿತ್ತು....

ಬಾವ್ಯಾಗ ಈಜಾಡ್ತಿದ್ವಿ,
ಕೆಸರಾಗ ಉಳ್ಳಾಡ್ತಿದ್ವಿ,
ಅಡವ್ಯಾಗ ಅಡ್ಡಾಡ್ತಿದ್ವಿ,
ಸಿಕ್ಕಿದ್ದು ಬಾಯಾಡಸ್ತಿದ್ವಿ,
ಆದ್ರೂ ಏನೂ ಆಗ್ತಿರ್ಲಿಲ್ಲ,
ಎಲ್ರೂ ಚನ್ನಾಗಿರ್ತಿದ್ವಿ,
ಎಷ್ಟೊಂದು ಚೆಂದಿತ್ತು....

ಸಾಲೀಗಿ ಹೋಗ್ತಿದ್ವಿ,
ಬಳಪ ಒಯ್ತಿದ್ವಿ,
ಪಾಟಿಮ್ಯಾಲ ಬರೀತಿದ್ವಿ,
ಬರ್ದಿದ್ದು ಉಗಳ್ಹಚ್ಚಿ ಒರಿಸ್ತಿದ್ವಿ,
ಬಳಪಾ ಆಡ್ತದ್ವಿ,
ಅದನ್ನ ತಿಂತದ್ವಿ,
ಆದ್ರೂ ಏನೂ ಆಗ್ತಿರ್ಲಿಲ್ಲ,
ಎಲ್ರೂ ಚನ್ನಾಗಿರ್ತಿದ್ವಿ,
ಎಷ್ಟೊಂದು ಚೆಂದಿತ್ತು..

ಒಳಗ ಕಾಲ್ಹಾಕಿ,
ಸೈಕಲ್ ಪೆಡಲ್ ತುಳಿತಿದ್ವಿ,
ಎತ್ತಿನ ಗಾಡಿ ಜಿಗದ ಹತ್ತಿದ್ವಿ,
ಎಮ್ಮಿ ಮ್ಯಾಲ ಕುಂದರ್ತಿದ್ವಿ
ಗಿಡದಾಗ ಜೋತಾಡ್ತಿದ್ವಿ
ಜೇನ ಬಿಡಸ್ತಿದ್ವಿ,
ಹುಳಾ ಕಡಸ್ಕೊಳ್ತಿದ್ವಿ
ಆದ್ರೂ ಏನೂ ಆಗ್ತಿರ್ಲಿಲ್ಲ,
ಎಲ್ರೂ ಚನ್ನಾಗಿರ್ತಿದ್ವಿ
ಎಷ್ಟೊಂದು ಚೆಂದಿತ್ತು..

ಜಾತಿ ಗೀತಿ ಮಾಡ್ತರ್ಲಿಲ್ಲ
ಹೆಣ್ಣು ಗಂಡು ಅಂತಿರ್ಲಿಲ್ಲ
ಹಗಲು ರಾತ್ರಿ ಓಡಾಡ್ತಿದ್ವಿ
ಮನಿ ಮಠ ಮರೀತಿದ್ವಿ
ಆದ್ರೂ ಏನೂ ಆಗ್ತಿರ್ಲಿಲ್ಲ
ಎಲ್ರೂ ಚನ್ನಾಗಿರ್ತಿದ್ವಿ
ಎಷ್ಟೊಂದು ಚೆಂದಿತ್ತು.....

ಮೊಬೈಲ್ ಕಂಪ್ಯೂಟರ್
ಬಂದಿರ್ಲಿಲ್ಲ,
ರೇಡಿಯೋ ಮಾತ್ರ ಕೇಳ್ತಿದ್ವಿ,
ಬೇಕ್ರಿ ತಿಂಡಿ ಗೊತ್ತಿರ್ಲಿಲ್ಲ,
ಥಾಲಿಪಟ್ಟ ಸವಿತಿದ್ವಿ,
ಹಾಲು ಮಜ್ಗಿ ಕುಡಿತಿದ್ವಿ,
ಉಂಡಾಡಿಯಾಗಿ ಅಲಿತಿದ್ವಿ,
ಆದ್ರೂ ಏನೂ ಆಗ್ತಿರ್ಲಿಲ್ಲ,
ಎಲ್ರೂ ಚನ್ನಾಗಿರ್ತಿದ್ವಿ,
ಎಷ್ಟೊಂದು ಚೆಂದಿತ್ತು.....

ಹಿಂಗ ಹೇಳ್ತಾ ಹೋದ್ರ,
ಮುಗಿಯಾಂಗಿಲ್ಲ ನಮ್ ಕತಿ,
ಇರ್ಲಿಲ್ಲ ನಮಗ ಯಾವ ಬಂಧ,
ಹಕ್ಕಿಯಂಗ ಹಾರಾಡ್ತಿದ್ವಿ,
ನಮ್ಮನ್ನ ಕಾಳಜಿ ಮಾಡಾಕ
ಇರ್ಲಿಲ್ಲ ಪುರಸೊತ್ತ ಹಡದವ್ರೀಗಿ,
ಆದ್ರೂ ಏನೂ ಆಗ್ತಿರ್ಲಿಲ್ಲ,
ಎಲ್ರೂ ಚನ್ನಾಗಿರ್ತಿದ್ವಿ,
ಎಷ್ಟೊಂದು ಚೆಂದಿತ್ತು ನಂಬಾಲ್ಯ,
ಎಷ್ಟೊಂದು ಸಂಭ್ರಮವಿತ್ತು ಚಡ್ಡಿ
ದೋಸ್ತಿಯಲಿ.

— MONISHA S, *6E*

# ಕ್ಷಮಾ ದಿನ (July 22)

ಕ್ಷಮೆ ಇರಲಿ, 'ಕ್ಷಮಾದಿನ' ವಂತೆ ಕೇಳಲು ಎಷ್ಟು ಸೊಗಸಾಗಿದೆ. ನನಗೂ ಗೊತ್ತಿರಲಿಲ್ಲ, ಇಲ್ಲಿಯವರೆಗೂ ಆಚರಿಸಿದ ಎಲ್ಲಾ ದಿನಗಳಿಗಿಂತಲೂ ಇದು ನಿಜಕ್ಕೂ ಅರ್ಥಪೂರ್ಣ ದಿನ ಅನಿಸುತ್ತದೆ. ಎಷ್ಟೋ ಸಂಬಂಧಗಳನ್ನ ನಮ್ಮ ಅಹಂಕಾರದಿಂದಲೇ ಕಳೆದುಕೊಳ್ಳುತ್ತೇವೆ. ಆಧುನಿಕ ಜೀವನಶೈಲಿ, ಧಾವಂತದ ಬದುಕಿನ ಮಧ್ಯೆ, ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ, ತಮ್ಮ ಹೀಗೆ ನಮ್ಮ ಬದುಕಿನ ಬಹುಮುಖ್ಯ ಸಂಬಂಧಗಳನ್ನ ಕಡೆಗಾಣಿಸುತ್ತಿದ್ದೇವೆ. ಮಾಡಿದ ತಪ್ಪಿಗೆ ಕ್ಷಮೆ ಕೇಳುವ ಮೂಲಕ ಸಂಬಂಧಗಳನ್ನ ಮತ್ತಷ್ಟು ಗಟ್ಟಿಗೊಳಿಸಿಕೊಳ್ಳೋಣ. ದೊಡ್ಡವರು ಹೇಳಿದ ಮಾತಿಗೆ ಧೈರ್ಯವಂತ ಮಾತ್ರ ಕ್ಷಮೆ ಕೇಳುತ್ತಾನೆ, ಹೃದಯವಂತನಿಗೆ ಮಾತ್ರವೇ ಕ್ಷಮಿಸುವ ಗುಣವಿರುತ್ತದೆ.

— (ಸಂಗ್ರಹ) SINCHANA, *9C*